**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 111/2021**

**ಪಿಡಬ್ಲೂ-6**

**ಸಿಡಬ್ಲೂ-6**

| | | |
|---|---|---|
| ಸಾಕ್ಷಿದಾರರ ಹೆಸರು | - | ದಿನೇಶಕುಮಾರ |
| ತಂದೆಯ ಹೆಸರು | - | ತಿಮ್ಮನಾಯಕ |
| ವಯಸ್ಸು | - | 38 |
| ಕೆಲಸ | - | ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ |
| ವಾಸ | - | ತಿಪ್ಪೂರು |

**ದಿನಾಂಕ 19.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ನನ್ನನ್ನು ಕೆ.ಆರ್.ನಗರ ಪೋಲಿಸರು ಈ ಹಿಂದೆ ಯಾವುದೇ ಸ್ಥಳಕ್ಕೆ ಕರೆಯಿಸಿ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ನಿಪಿ 2 ರಲ್ಲಿರುವ ಸಾಕ್ಷಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಸಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು.ಮಾ 1 ರಿಂದ 3 ನು ನಾನು ಈ ಹಿಂದೆ ನೋಡಿಲ್ಲ. ಚಾಸಾ 1 ರವರು ನನ್ನ ಸಮಕ್ಷಮ ಯಾವುದೇ ಸ್ಥಳ ತೋರಿಸಿ ಮು.ಮಾ 1 ರಿಂದ 3 ನ್ನು ಹಾಜುರಪಡಿಸಿರುವುದಿಲ್ಲ. ಈ ಹಿಂದೆ ನಾನು ನನ್ನ ವೈಯಕ್ತಿಕ ವಿಚಾರಕ್ಕೆ ಠಾಣೆಗೆ ಹೋದಾಗ ಪೋಲಿಸರ ಕೋರಿಕೆ ಮೇರೆಗೆ 4 ವರ್ಷದ ಹಿಂದೆ ನಿಪಿ 2 ಕ್ಕೆ ನಾನು ಸಹಿ ಮಾಡಿದ್ದೇನೆ, ನಿಪಿ 2 ರಲ್ಲಿ ನನಗೆ ಏನು ಬರೆದಿದೆ ಗೊತ್ತಿಲ್ಲ, ನಾನು ಓದಿ ತಿಳಿದುಕೊಂಡಿಲ್ಲ ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ನಿಪಿ 3 ರನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ದಿಃ 03.06.2019 ರಂದು ಪೋಲಿಸರು ನನ್ನನ್ನು ಕೆ.ಆರ್.ನಗರ ಟೌನ್ ಬಿ.ವಿ ರಸ್ತೆಯಲ್ಲಿರುವ ಸಿಟಿ ಲೈಟ್ ಹೋಟೆಲ್ ಮುಂಭಾಗ ಸ್ಥಳ ಮಹಜರ್ ಗೆ ಬಂದಿದ್ದಾಗ ನನ್ನನ್ನು ಪಂಚರಾಗಿ ಇರುವಂತೆ ಕೋರಿಕೊಂಡಿರುತ್ತಾರೆ, ಅದಕ್ಕೆ ನಾನು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ಆಗ ಚಾಸಾ 1 ರವರು ಸ್ಥ,ಳದಲ್ಲಿದ್ದು ಪೋಲಿಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತಾರೆ ಅದರಂತೆ ಪೋಲಿಸರು ನಿಪಿ 2 ರಂತೆ ವಿವರವಾದ ಮಹಜರ್ ಕ್ರಮ ಜರುಗಿಸಿ ಮು.ಮಾ 1 ರಿಂದ 3 ನ್ನು ಪೋಲಿಸರು ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಿಪಿ 2 ಕ್ಕೆ ನಾನು ಓದಿ ತಿಳಿದುಕೊಂಡು ನನ್ನ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ 3 ರ ನಕ್ಷೆಯನ್ನು ಪೋಲಿಸರು ತಯಾರಿಸಿದ್ದು ಅದಕ್ಕೂ ಕೂಡ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

2. ನಾನು ತಿಪ್ಪೂರು ಗ್ರಾಮ ಪಂಚಾಯಿತಿಯಲ್ಲಿ ಸರ್ಕಾರಿ ನೌಕರನಾಗಿ ಕೆಲಸ ಮಾಡುತ್ತಿದ್ದೇನೆ. ಯಾವುದೇ ದಾಖಲೆಗೆ ಸಹಿ ಮಾಡುವ ಮೊದಲು ಆ ದಾಖಲೆಯನ್ನು ಓದಿ ತಿಳಿದುಕೊಂಡು ನಂತರ ಸಮ್ಮತಿ ಇದ್ದರೆ ನನ್ನ ಸಹಿ ಮಾಡಬೇಕು ಎಂದು ಗೊತ್ತಿದೆ ಎಂದರೆ ಸರಿ. ಆದರೆ ಈ ಪ್ರಕರಣದಲ್ಲಿ ಪೋಲಿಸರು ನನಗೆ ಪರಿಚಯವಿದ್ದು ಅವರ ಕೋರಿಕೆ ಮೇರೆಗೆ ನಿಪಿ 2 ನ್ನು ಓದದೆ ಸಹಿ ಮಾಡಿದ್ದೇನೆ. ಸಾಕ್ಷಿ ಮುಂದುವರೆದು ಹಾಗೆ ಸಹಿ ಮಾಡಿರುವುದು ತಪ್ಪು ಎಂದು ಈಗ ಗೊತ್ತಾಯಿತು ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ.

3. ನಿಪಿ 3 ರಲ್ಲಿರುವ ಸಹಿ ನನ್ನದೇ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪೋಲಿಸರು ನನ್ನ ಸಮಕ್ಷಮ ನಿಪಿ 2 ರಂತೆ ಸ್ಥಳ ಮಹಜರ್ ಮಾಡಿದ್ದರೂ, ನಿಪಿ 3 ರಲ್ಲಿ ನಾನೇ ಸಹಿ ಮಾಡಿದ್ದರೂ ಕೂಡ ಆರೋಪಿತರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ 1 ರಿಂದ 3 ನ್ನು ನಾನು ಈ ಹಿಂದೆ ನೋಡಿದ್ದರೂ ಕೂಡ ಆರೋಪಿತರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

**ನ್ಯಾಯಾಲಯದ ಪ್ರಶ್ನೆ:**

ನಾನು ಪಿ.ಯು.ಸಿ ವಿದ್ಯಾಭ್ಯಾಸ ಮಾಡಿದ್ದೇನೆ. ಕನ್ನಡ ಓದಲು ಬರೆಯಲು ಬರುತ್ತದೆ. ನನಗೆ ಸಾಕ್ಷ್ಯ ಹೇಳಲು ಯಾರು ಹೆದರಿಸಿರುವುದಿಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 111/2021**

**ಪಿಡಬ್ಲೂ-5**

**ಸಿಡಬ್ಲೂ-4**

| | | |
|---|---|---|
| ಸಾಕ್ಷಿದಾರರ ಹೆಸರು | - | ನಂದೀಶ |
| ತಂದೆಯ ಹೆಸರು | - | ವೆಂಕಟೇಶ |
| ವಯಸ್ಸು | - | 30 |
| ಕೆಲಸ | - | ಕೂಲಿ |
| ವಾಸ | - | ಡಿ.ಕೆ.ಕೊಪ್ಪಲು |

**ದಿನಾಂಕ 19.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ 1 ಮತ್ತು 3 ನನಗೆ ಗೊತ್ತಿಲ್ಲ. ನ್ಯಾಯಾಲಯಾದ ಮುಂದೆ ಇರುವ ಆರೋಪಿತರನ್ನು ನಾನು ಈ ಹಿಂದೆ ನೋಡಿಲ್ಲ. ಆರೋಪಿತರು ಚಾಸಾ 1 ರವರ ಮೇಲೆ ಗಲಾಟೆ ಮಾಡಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಅವರ ಸಮವಸ್ತ್ರ ಹರಿದು ಹಾಕುವುದನ್ನು ನಾನು ನೋಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದೆ ಇರುವ ಸಮವಸ್ತ್ರಗಳನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ದಿಃ 02.06.2019 ರಂದು ನಾನು ಮತ್ತು ಚಾಸಾ 4 ರವರು ರಾತ್ರಿ 11 ರಿಂದ 11.10 ರ ಸಮಯದಲ್ಲಿ ಬೈಕಿನಲ್ಲಿ ಕೆ.ಆರ್.ನಗರ ಟೌನ್ ನ ಬಿ.ವಿ.ರಸ್ತೆಯ ಸಿಟಿ ಲೈಟ್ ಹೋಟೆಲ್ ಮುಂದೆ ಹಾಸನ-ಮೈಸೂರು ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದೇವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ಚಾಸಾ 1 ರವರ ಜೊತೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ಹೋಟೆಲ್ ನಿಂದ ಹೊರಗಡೆ ಬಂದು ನಮ್ಮ ದುಡ್ಡು, ನಮ್ಮ ಖಾಸು ಎಷ್ಟೋತ್ತಾದರು ಊಟ ಮಾಡುತ್ತೇವೆ ನಾವು ಲೋಕಲ್ ಹುಡುಗರು ನೀನ್ಯಾರು ಕೇಳುವು ದಕ್ಕೆ ಎಂದು ಹೇಳಿ ಚಾಸಾ 1 ರವರ ಜೊತೆ ಜಗಳ ತೆಗೆದು ಅವರನ್ನು ಅವಾಚ್ಯ ಶಬ್ದಗಳಿಂದ ಬೈದು ಚಾಸಾ 1 ರವರ ಸಮವಸ್ತ್ರ ಹಿಡಿದು ಎಳೆದಾಡಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಅವರ ಸಮವಸ್ತ್ರವನ್ನು ಹರಿದು ಹಾಕಿರುತ್ತಾರೆ ಎಂದರೆ

ಸರಿಯಲ್ಲ. ಆಗ ನಾನು ಮತ್ತು ಚಾಸಾ 4 ಮತ್ತು 5 ರವರು ಅವರನ್ನು ಸಮಾಧಾನಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ದಿನ ಚಾಸಾ 1 ರವರ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಂಬಂದ ದಿಃ 04.06.2019 ರಂದು ಈಗ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸ.ಸ.ಅ ರವರ ಕೋರಿಕೆ ಮೇರೆಗೆ ಹೇಳಿಕೆಯನ್ನು ನಿಪಿ 7 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು.ಮಾ 1 ರಿಂದ 3 ರನ್ನು ನಾನು ಘಟನೆ ದಿನ ಚಾಸಾ 1 ರವರು ಧರಿಸಿದ್ದರು ಎಂಬುದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 7 ರಂತೆ ಹೇಳಿಕೆ ನೀಡಿದ್ದರೂಾ, ಕೃತ್ಯವನ್ನು ಕಣ್ಣಾರೆ ನೋಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 111/2021**

**ಪಿಡಬ್ಲೂ-4**

**ಸಿಡಬ್ಲೂ-3**

| | | |
|---|---|---|
| ಸಾಕ್ಷಿದಾರರ ಹೆಸರು | - | ಶಿವಣ್ಣ |
| ತಂದೆಯ ಹೆಸರು | - | ತಿಮ್ಮನಾಯಕ |
| ವಯಸ್ಸು | - | 47 |
| ಕೆಲಸ | - | ವ್ಯವಸಾಯ |
| ವಾಸ | - | ತಿಪ್ಪೂರು |

**ದಿನಾಂಕ 19.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ 1 ಮತ್ತು 4 ನನಗೆ ಗೊತ್ತಿಲ್ಲ. ನ್ಯಾಯಾಲಯಾದ ಮುಂದೆ ಇರುವ ಆರೋಪಿತರನ್ನು ನಾನು ಈ ಹಿಂದೆ ನೋಡಿಲ್ಲ. ಆರೋಪಿತರು ಚಾಸಾ 1 ರವರ ಮೇಲೆ ಗಲಾಟೆ ಮಾಡಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಅವರ ಸಮವಸ್ತ್ರ ಹರಿದು ಹಾಕುವುದನ್ನು ನಾನು ನೋಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದೆ ಇರುವ ಸಮವಸ್ತ್ರಗಳನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ದಿಃ 02.06.2019 ರಂದು ನಾನು ಮತ್ತು ಚಾಸಾ 4 ರವರು ರಾತ್ರಿ 11 ರಿಂದ 11.10 ರ ಸಮಯದಲ್ಲಿ ಬೈಕಿನಲ್ಲಿ ಕೆ.ಆರ್.ನಗರ ಟೌನ್ ನ ಬಿ.ವಿ.ರಸ್ತೆಯ ಸಿಟಿ ಲೈಟ್ ಹೋಟೆಲ್ ಮುಂದೆ ಹಾಸನ-ಮೈಸೂರು ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದೇವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ಚಾಸಾ 1 ರವರ ಜೊತೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ಹೋಟೆಲ್ ನಿಂದ ಹೊರಗಡೆ ಬಂದು ನಮ್ಮ ದುಡ್ಡು, ನಮ್ಮ ಖಾಸು ಎಷ್ಟೊತ್ತಾದರು ಊಟ ಮಾಡುತ್ತೇವೆ ನಾವು ಲೋಕಲ್ ಹುಡುಗರು ನೀನ್ಯಾರು ಕೇಳುವು ದಕ್ಕೆ ಎಂದು ಹೇಳಿ ಚಾಸಾ 1 ರವರ ಜೊತೆ ಜಗಳ ತೆಗೆದು ಅವರನ್ನು ಅವಾಚ್ಯ ಶಬ್ದಗಳಿಂದ ಬೈದು ಚಾಸಾ 1 ರವರ ಸಮವಸ್ತ್ರ ಹಿಡಿದು ಏಳೆದಾಡಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಅವರ ಸಮವಸ್ತ್ರವನ್ನು ಹರಿದು ಹಾಕಿರುತ್ತಾರೆ ಎಂದರೆ

ಸರಿಯಲ್ಲ.  ಆಗ ನಾನು ಮತ್ತು ಚಾಸಾ 4 ಮತ್ತು 5 ರವರು ಅವರನ್ನು ಸಮಾಧಾನಪಡಿಸಿರುತ್ತೇವೆ ಎಂದರೆ ಸರಿಯಲ್ಲ.  ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ದಿನ ಚಾಸಾ 1 ರವರ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಂಬಂದ  ದಿಃ 04.06.2019 ರಂದು ಈಗ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.   ಸ.ಸ.ಅ ರವರ ಕೋರಿಕೆ ಮೇರೆಗೆ ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು.  ನ್ಯಾಯಾಲಯದ ಮುಂದಿರುವ ಮು.ಮಾ 1 ರಿಂದ 3 ರನ್ನು ನಾನು ಘಟನೆ ದಿನ ಚಾಸಾ 1 ರವರು ಧರಿಸಿದ್ದರು ಎಂಬುದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 6 ರಂತೆ ಹೇಳಿಕೆ ನೀಡಿದ್ದರೂ, ಕೃತ್ಯವನ್ನು ಕಣ್ಣಾರೆ ನೋಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ